1904 (1462) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ –13 ರಲ್ಲಿನ ಚಿತ್ರದುರ್ಗದಿಂದ ಹೊಸಪೇಟೆಯವರೆಗಿನ ರಸ್ತೆ ತುಂಬಾ ಹದಗೆಟ್ಟಿರುವುದರಿಂದಾಗಿ ಅಲ್ಲಿ ಅನೇಕ ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ರಾಷ್ಟ್ರೀಯ ಹೆದ್ದಾರಿಯನ್ನು ಅಭಿವೃದ್ಧಿಪಡಿಸಲು ಸರ್ಕಾರದಿಂದ ಕೈಗೊಳ್ಳಲಾಗಿರುವ ಕ್ರಮವೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಬಂದಿದೆ.

ಆ) ರಾಷ್ಟ್ರೀಯ ಹೆದ್ದಾರಿಯ ಈ ಭಾಗದಲ್ಲಿ ಈ ಕೆಳಕಂಡ ಕಾಮಗಾರಿಗಳು ಪ್ರಗತಿಯಲ್ಲಿವೆ:

1) ರಾಷ್ಟ್ರೀಯ ಹೆದ್ದಾರಿ – 13 ಕಿ.ಮೀ290.00 ರಿಂದ 300.00 (13 ಕಿಮೀ ವರೆಗಿನ ಸಂಚಾರ ಪಥದ ಅಭಿವೃದ್ಧಿ ಕಾಮಗಾರಿ.

2) ರಾಷ್ಟ್ರೀಯ ಹೆದ್ದಾರಿ –13 ರ ಕಿಮೀ 322.00 ರಿಂದ 335.00 (13 ಕಿಮೀ) ವರೆಗಿನ ನಿಯತಕಾಲಿಕ ನವೀಕರಣ ಕಾಮಗಾರಿ.

ಲಭ್ಯವಿರುವ ಅನುದಾನವು ಅವಶ್ಯಕತೆಗಿಂತಲೂ ಕಡಿಮೆ ಇರುತ್ತದೆ. ಉಳಿದಂತೆ ಸಾಮಾನ್ಯ ದುರಸ್ತಿ ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ರಸ್ತೆಯ ಉಳಿದ ಭಾಗವನ್ನು ಸಂಚಾರ ಯೋಗ್ಯವಾಗಿಡಲಾಗಿದೆ.

1905 (2281) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಕ್ಫ್ ವತಿಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

ಆ) ಬಳ್ಳಾರಿ ಜಿಲ್ಲೆಗೆ ವಕ್ಫ್ ವತಿಯಿಂದ ಇದುವರೆವಿಗೆ ಕೈಗೊಂಡಿರುವ ಕಾರ್ಯಕ್ರಮಗಳೇನು;

ಇ) ಇದುವರೆವಿಗೂ ಬಿಡುಗಡೆಯಾದ ಅನುದಾನವೆಷ್ಟು; ತಾಲ್ಲೂಕಾವಾರು ವಿವರ ನೀಡುವುದು;

ಈ) ಅಲ್ಪಸಂಖ್ಯಾತರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ರಾಜ್ಯದಲ್ಲಿರುವ ಮುಸ್ಲಿಂ ಧಾರ್ಮಿಕ ಸಂಸ್ಥೆಗಳನ್ನು ಗುರುತಿಸಿ ಅವುಗಳನ್ನು ನೋಂದಣಿ ನಿರ್ವಹಣೆ, ರಕ್ಷಣೆ ಮತ್ತು ಅಭಿವೃದ್ಧಿ ಮಾಡವುದು ಹಾಗೂ ಈ ಕೆಳಗಿನ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ :–

1) ರಾಜ್ಯದಲ್ಲಿ ಇರುವಂತಹ ಮುಸ್ಲಿಂ ಜನಾಂಗಕ್ಕೆ ಸೇರಿದ ಧಾರ್ಮಿಕ ಸಂಸ್ಥೆಗಳನ್ನು ಗುರುತಿಸಿ ಅವುಗಳನ್ನು ಮತ್ತು ಆ ಸಂಸ್ಥೆಗಳಿಗೆ ಸೇರಿದ ಆಸ್ತಿಗಳನ್ನು ವಕ್ಫ್ ಕಾಯಿದೆ ಪ್ರಕಾರ ನೋಂದಣಿ ಮಾಡುವುದು.

2) ನೋಂದಣಿಯಾದ ವಕ್ಫ್ ಸಂಸ್ಥೆಗಳನ್ನು ದಿನನಿತ್ಯ ನಿರ್ವಹಣೆಗಾಗಿ ಬೈಲಾಗಳನ್ನು ರಚಿಸುವುದು.

3) ಸಂಸ್ಥೆಗಳ ಆಡಳಿತ ನಿರ್ವಹಣೆಗೆ ಆಡಳಿತ ಸಮಿತಿಗಳು ಮುತವಲ್ಲಿಗಳನ್ನು ನೇಮಕ ಮಾಡುವುದು.

4) ವಕ್ಫ ಸಂಸ್ಥೆಗಳ ರಕ್ಷಣೆ, ದುರಸ್ತಿ ಮತ್ತು ಅಭಿವೃದ್ಧಿಗೆ ರಾಜ್ಯ ಮತ್ತು ಕೇಂದ್ರ ವಕ್ಫ್ ಕೌನ್ಸಿಲ್‌ನಿಂದ ಸಾಲ ಹಾಗೂ ಸಹಾಯಧನವನ್ನು ಒದಗಿಸಿಕೊಡುವುದು.

ಆ) 2006–07 ನೇ ಸಾಲಿನಲ್ಲಿ ರೂ. 55.00 ಲಕ್ಷಗಳ ಸಹಾಯಧನವನ್ನು ಮಸೀದಿಗಳ ರಿಪೇರಿ, ಈದ್ಗಾ ಮತ್ತು ಖಬರಾಸ್ತಾನಗಳ ಕಾಂಪೌಂಡ್ ಗೋಡೆಗಳನ್ನು ನಿರ್ಮಿಸಲು ನೀಡಲಾಗಿದೆ.

ಇ) **ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ,**

2006–07 ನೇ ಸಾಲಿನಲ್ಲಿ ಇದುವರೆವಿಗೂ ರೂ. 65–00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ತಾಲ್ಲೂಕಾವಾರು ವಿವರ ಈ ಕೆಳಕಂಡಂತಿದೆ.

1)	ಸಿಂದೂರು	ರೂ. 36.00 ಲಕ್ಷಗಳು	15 ಸಂಸ್ಥೆ
2)	ಬಳ್ಳಾರಿ	ರೂ. 16.50 ಲಕ್ಷಗಳು	12 ಸಂಸ್ಥೆ
3)	ಹಡಗಲಿ	ರೂ. 8.00 ಲಕ್ಷಗಳು	2 ಸಂಸ್ಥೆ
4)	ಸಿರಗುಪ್ಪೆ	ರೂ. 3.50 ಲಕ್ಷಗಳು	5 ಸಂಸ್ಥೆ
5)	ಹೊಸಕೋಟೆ	ರೂ. 1.00 ಲಕ್ಷಗಳು	1 ಸಂಸ್ಥೆ

ಈ) ಅಲ್ಪಸಂಖ್ಯಾತರ ಅಭಿವೃದ್ಧಿಗೆ ಈ ಕೆಳಕಂಡಂತೆ ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳಲಾಗಿದೆ:–

ಅ) ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ :-

1) **<u>ರಾಜ್ಯವಲಯ ಕಾರ್ಯಕ್ರಮಗಳು :-</u>**

1) ಶಾದಿಮಹಲ್ : ಸಮುದಾಯ ಭವನಗಳ ನಿರ್ಮಾಣ

2) ಅಲ್ಪಸಂಖ್ಯಾತರಿಗಾಗಿ ಹಾಸ್ಟೇಲ್ ಕಟ್ಟಡಗಳ ನಿರ್ಮಾಣ

3) ಅಲ್ಪಸಂಖ್ಯಾತರ ಸಂಸ್ಥೆಗಳಿಂದ ವಿದ್ಯಾರ್ಥಿ ನಿಲಯ ಹಾಗೂ ಕಟ್ಟಡಗಳ ನಿರ್ಮಾಣ

4) ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳು

5) ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ

6) ಸರ್ಕಾರಿ ಅಲ್ಪಸಂಖ್ಯಾತ ಶಾಲೆಗಳ ಶಿಕ್ಷಣ ಮತ್ತು ಕಲಿಕೆ ಸಾಧನಗಳು

7) ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ.

2) **<u>ಜಿಲ್ಲಾ ವಲಯ ಕಾರ್ಯಕ್ರಮಗಳು :-</u>**

1) ಅಲ್ಪಸಂಖ್ಯಾತರಿಗಾಗಿ ತರಬೇತಿ

2) ಅಲ್ಪಸಂಖ್ಯಾತರ ಹಾಸ್ಟೇಲ್‌ಗಳು

3) ಅಲ್ಪಸಂಖ್ಯಾತರ ಐಟಿಐ : ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ

4) ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿ ನಿಲಯಗಳು

5) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು

6) ಅಲ್ಪಸಂಖ್ಯಾತರಿಗೆ ವೃತ್ತಿ ತರಬೇತಿ

7) ಅಲ್ಪಸಂಖ್ಯಾತರಿಗಾಗಿ ಅನಾಥಾಲಯಗಳು.

ಆ) ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ : ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. :-

1) ಸ್ವಾವಲಂಬನ ಸಾಲದ ಯೋಜನೆ

2) ಸಹಾಯಧನ ಯೋಜನೆ

3) ಅರಿವು (ವಿದ್ಯಾಭ್ಯಾಸ ಸಾಲ) ಯೋಜನೆ

4) ಗಂಗಾ ಕಲ್ಯಾಣ ಯೋಜನೆ

5) ಶ್ರಮಶಕ್ತಿ ಯೋಜನೆ

6) ಭೂ ಖರೀದಿ ಯೋಜನೆ

7) ರಾಷ್ಟ್ರೀಯ ಅಲ್ಪಸಂಖ್ಯಾತರ ಮತ್ತು ಹಣಕಾಸು ನಿಗಮದಿಂದ ಸಾಲವನ್ನು ಪಡೆದು ರಾಜ್ಯದ ಮತೀಯ ಅಲ್ಪಸಂಖ್ಯಾತರಿಗೆ ನೇರಸಾಲ ಯೋಜನೆಯಡಿಯಲ್ಲಿ ಸಾಲವನ್ನು ಕಲ್ಪಿಸಲಾಗುತ್ತಿದೆ.

1906 (2282) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) :– ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಶ್ರೀ ಕ್ಷೇತ್ರಗಳೆಂದು ಗುರುತಿಸಲ್ಪಟ್ಟಿರುವ ಸ್ಥಳಗಳು ಯಾವುವು; (ತಾಲ್ಲೂಕಾವಾರು ವಿವರ ನೀಡುವುದು)

ಆ) ಈ ಕ್ಷೇತ್ರಗಳಿಗಾಗಿ ಸರ್ಕಾರ ನಿಗದಿಪಡಿಸಿರುವ ಅನುದಾನವೆಷ್ಟು;

ಇ) ಈ ಕ್ಷೇತ್ರಗಳಲ್ಲಿ ಕೈಗೊಂಡಿರುವ ಕಾಮಗಾರಿಗಳೇನು;

ಈ) ಶ್ರೀ ಕ್ಷೇತ್ರವೆಂದು ಘೋಷಿಸಬೇಕಾದರೆ ಇರುವ ಮಾನದಂಡಗಳೇನು;

ಉ) ಕೂಡ್ಲಿಗಿ ತಾಲ್ಲೂಕಿನ ಉಜ್ಜಯಿನಿ ಗ್ರಾಮವನ್ನು ಶ್ರೀ ಕ್ಷೇತ್ರವೆಂದು ಘೋಷಿಸಲಾಗಿದೆಯೇ;

ಊ) ಹಾಗಿದ್ದಲ್ಲಿ ಈ ಗ್ರಾಮದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು;

ಋ) ಹಾಗಿದ್ದಲ್ಲಿ ಬಿಡುಗಡೆಯಾದ ಅನುದಾನ ಎಷ್ಟು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು):

ಅ) ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 1294 ಸಂಸ್ಥೆಗಳನ್ನು ಅಧಿಸೂಚಿತ ಸಂಸ್ಥೆಗಳೆಂದು ಪ್ರಕಟಿಸಲಾಗಿರುತ್ತದೆ. ಜಿಲ್ಲೆಯಲ್ಲಿರುವ ಈ ಕೆಳಕಂಡ ಸಂಸ್ಥೆಗಳನ್ನು ಶ್ರೀ ಕ್ಷೇತ್ರವೆಂದು ಕರೆಯುವ ಪ್ರತೀತ ಇರುತ್ತದೆ.

1) ಶ್ರೀ ವಿರೂಪಾಕ್ಷೇಶ್ವರ ದೇ. ಹಂಪಿ, ಹೊಸಕೋಟೆ ತಾಲ್ಲೂಕು

2) ಶ್ರೀ ಗುರುಬಸವೇಶ್ವರ ದೇ. ಕೊಟ್ಟೂರು, ಕೂಡ್ಲಿಗಿ ತಾಲ್ಲೂಕು

3) ²æà ¸ÀzÀAPÀvÀ(ಕುಮಾರಸ್ವಾಮಿ ದೇವಸ್ಥಾನ) ಸಂಡೂರು, ಸಂಡೂರು (ತಾ)

4) ಶ್ರೀ ಮಲ್ಲಿಕಾರ್ಜುನ ದೇ. ಕುರವತ್ತಿ, ಹೂವಿನ ಹಡಗಲಿ (ತಾ)

5) ಶ್ರೀ ಮೈಲಾರ ಲಿಂಗೇಶ್ವರ ದೇ. ಹೂವಿನ ಹಡಗಲಿ (ತಾ)

6) ಶ್ರೀ ಮರುಳು ಸಿದ್ಧೇಶ್ವರ ದೇ. ಉಜ್ಜಯಿನಿ, ಕೊಟ್ಟೂರು